ನಂತರ ಮತ್ತಷ್ಟು ದಕ್ಷಿಣಕ್ಕೆ ಸಾಗಿದವು. ದಕ್ಷಿಣ ಅಮೆರಿಕದ ತೀರಪ್ರದೇಶದ ವ್ಯಾಪ್ತಿಯನ್ನು ಕಂಡ ಮೆಗಲಾನನಿಗೆ ಅದನ್ನು ಕಿರಿದೆಂದು ತಾನು ಆ ಮೊದಲು ಭಾವಿಸಿದ್ದು ತಪ್ಪೆಂದು ಅರಿವಾಯಿತು. ಇದರಿಂದಾಗಿ ತಾನಿದ್ದ ಅಟ್ಲಾಂಟಿಕ್ ಸಾಗರವನ್ನು ಮತ್ತೊಂದು ಸಾಗರಕ್ಕೆ ಜೋಡಿಸುವ ಒಂದು ಜಲಮಾರ್ಗವನ್ನು ಬೇಗನೆ ಹುಡುಕುವುದು ಅಸಾಧ್ಯವೆಂಬುದನ್ನೂ ಅವನು ಅರಿತ.

## ಅಪರಿಚಿತ ಸ್ಥಳಗಳತ್ತ

ಕೆಲವು ವಾರಗಳ ಚಲನೆಯ ನಂತರ, ಅವರ ಪಯಣ ತೀರ ಪ್ರದೇಶ ಕಡಿದಾಗಿ ಪಶ್ಚಿಮದ ಕಡೆ ತಿರುಗಿತು. ಇದೇ ಏಷ್ಯಾದ ಜೊತೆ ಜೋಡಿಸುವ ಜಲಮಾರ್ಗ ಎಂದು ಮೆಗಲಾನ್ ಸಂತಸದಿಂದ ಬೀಗಿದ. 'ಮೈಗೆಲ್ಲಾ ಬೂದಿಯನ್ನು ಬಳಿದುಕೊಂಡು ಆದಿಮಾನವರಂತೆ ಬದುಕುತ್ತಿದ್ದ' ಹಾಗೂ 'ತಮ್ಮ ಶತ್ರುಗಳ ಮಾಂಸವನ್ನು ಭಕ್ಷಿಸುತ್ತಿದ್ದ' ಅಲ್ಲಿನ 'ಎತ್ತರವಿದ್ದ ಮಾನವರ' ಪರಿಚಯವಾಗಿ ಅವರೊಂದಿಗೆ ಘರ್ಷಣೆಯೂ ಆಯಿತು. ಪರಿಣಾಮವಾಗಿ ಮೆಗಲಾನನ ಒಬ್ಬ ನಾವಿಕ ಮಡಿದ.

ನಂತರದ ಹದಿನೈದು ದಿನಗಳಲ್ಲಿ ಆ ತೀರಪ್ರದೇಶವನ್ನೇ 300 ಕಿಲೋಮೀಟರ್‌ನಷ್ಟು ದೂರ ಆ ಜಲಮಾರ್ಗದಲ್ಲಿ ಹಿಂಬಾಲಿಸಿದ ನಂತರ, ಅದು ಮತ್ತೊಂದು ಸಾಗರಕ್ಕೆ ಜೋಡಿಸುವ ಜಲಸಂಧಿ ಅಲ್ಲ, ನದಿಯೊಂದು (ಇಂದು ಅದಕ್ಕೆ ಪ್ಲೇಟ್ ನದಿ ಎಂಬ ಹೆಸರಿದೆ) ಸಾಗರವನ್ನು ಸೇರುವ ಕೊಲ್ಲಿ (ಬೇ) ಎಂದು ಅರಿವಾಯಿತು. ಅವನಿಗೆ ಭಾರೀ ನಿರಾಸೆಯಾಯಿತು. ಆದರೂ ಎದೆಗುಂದದ ಮೆಗಲಾನ್ ಅದುವರೆಗೂ ಯೂರೋಪಿನ ನಾವಿಕರಿಗೆ ಪರಿಚಯವಿದ್ದ ಆ ಸ್ಥಳಕ್ಕಿಂತ ಇನ್ನೂ ದಕ್ಷಿಣ ದಿಕ್ಕಿಗೆ ಸಾಗಲು ನಿರ್ಧರಿಸಿದ.

ಮತ್ತೆರಡು ತಿಂಗಳ ಪಯಣದ ನಂತರ ಮೆಗಲಾನ್‌ನ ತಂಡ 'ಸೇಂಟ್ ಜೂಲಿಯನ್' ಎಂಬಲ್ಲಿ ಲಂಗರು ಹಾಕಿ ಚಳಿಗಾಲವನ್ನು ಕಳೆಯಲು ನಿರ್ಧರಿಸಿತು. ಪರಿಚಯವಿರದಿದ್ದ ವಿಸ್ತಾರವಾದ ಸಾಗರ ಪ್ರದೇಶ, ಕೊರೆಯುವ ಚಳಿ, ಬಿರುಗಾಳಿ, ಆಹಾರದ ಅಭಾವ, ಸ್ಥಳೀಯ ಜನರ ಭೀತಿ, ಇದರಿಂದ ಮೆಗಲಾನನ ನಾವಿಕರು ಹೈರಾಣಾದರು. ದಂಗೆಯೆದ್ದರು. ಇದರಿಂದ ತನ್ನ ಭವಿಷ್ಯವನ್ನೇ ಪಣವಾಗಿಟ್ಟು ಕೈಗೊಂಡ ಸಾಹಸ ಪಯಣದ ಮೇಲಾಗುವ ಪರಿಣಾಮವನ್ನು ಅರಿತ ಮೆಗಲಾನ್, ದಂಗೆಯ ನಾಯಕರನ್ನು ಕ್ರೂರವಾಗಿ ಸದೆಬಡಿಯಲು ಹಿಂತೆಗೆಯಲಿಲ್ಲ. ಆ ಪೈಕಿ ಒಂದು ಹಡಗಿನ ಕಪ್ತಾನನಾದ ಗ್ಯಾಸ್ಪರ್ ಡಿ ಕಸಾಡಾನ ತಲೆ ಕತ್ತರಿಸಲಾಯಿತು. ಮಿಕ್ಕವರು ಆ ಕ್ಷಣದಲ್ಲಾದರೂ ತೆಪ್ಪಗಾದರು.

ನಂತರದ ಐದು ತಿಂಗಳುಗಳ ಕಾಲ ದಕ್ಷಿಣ ಅಮೆರಿಕ ಖಂಡದ ದಕ್ಷಿಣ ಭಾಗದಲ್ಲಿ ತಂಗಿದ ಮೆಗಲಾನ್, ನಂತರ ಪಯಣವನ್ನು ಮುಂದುವರೆಸಿದ. ಆ ನಡುವೆ ಅವನ ತಂಡದಲ್ಲಿದ್ದ ಸ್ಯಾಂಟಿಯಾಗೊ ಹಡಗು ಬಂಡೆಗಳಿಗೆ ಅಪ್ಪಳಿಸಿ ನಾಶವಾಯಿತು.

ಕೊನೆಗೆ ದಕ್ಷಿಣ ಅಮೆರಿಕದ ತುಟ್ಟ ತುದಿಯಲ್ಲಿ ಒಂದು ಜಲಸಂಧಿ ಅವನ ತಂಡದ ಎರಡು ಹಡಗುಗಳಿಗೆ ಗೋಚರಿಸಿತು. ಆನಂದತುಂದಿಲನಾದ ಮೆಗಲಾನ್, ಅದಕ್ಕೆ 'ಟೋಡೋಸ್ ಲಾಸ್ ಸ್ಯಾಂಟೋಸ್' (ಸಂತರೆಲ್ಲರ ಜಲಮಾರ್ಗ) ಎಂದು ಹೆಸರಿಟ್ಟು ಅದರೊಳಗೆ ಪ್ರವೇಶಿಸಿದ. ಕಡಿದಾದ ಆ ಜಲಮಾರ್ಗಕ್ಕೆ ಇಂದು 'ಮೆಗಲಾನನ ಜಲಸಂಧಿ' (ಸ್ಟ್ರೈಟ್ ಆಫ್ ಮೆಗಲಾನ್) ಎಂಬ ಹೆಸರಿದೆ.

ಆ ಮಾರ್ಗದೊಳಗೆ ಸಾಗುವ ನಡುವೆ, ಮೆಗಲಾನ್ ತಾನು ಸಾಗುತ್ತಿದ್ದ ಹಾದಿಯಲ್ಲಿದ್ದ ನೂರಾರು ದ್ವೀಪಗಳ ನಡುವೆ ತನ್ನ ಹಡಗುಗಳ ಯಾನವನ್ನು ಎಚ್ಚರಿಕೆಯಿಂದ ನಿರ್ದೇಶಿಸುತ್ತಾ (ನ್ಯಾವಿಗೇಷನ್), ಸುಮಾರು ಮೂರು ವಾರಗಳಲ್ಲಿ 500 ಕಿಲೋಮೀಟರ್ ದೂರ ಕ್ರಮಿಸಿದ; ವಿಶಾಲವಾದ ಸಾಗರವೊಂದು ಗೋಚರಿಸುವುದನ್ನೇ ತಾಳ್ಮೆಯಿಂದ ಕಾಯುತ್ತಿದ್ದ. ನಂತರ ಅಲ್ಲಿ ಗೋಚರಿಸಿದ ದ್ವೀಪವೊಂದರ ಎರಡು ಬದಿಯಲ್ಲಿದ್ದ ಜಲಮಾರ್ಗಗಳಲ್ಲಿ ಒಂದನ್ನು ಶೋಧಿಸುವಂತೆ ಸ್ಯಾನ್ ಆಂಟೋನಿಯೊ ಹಡಗಿನ ಕಪ್ತಾನನಿಗೆ ಆದೇಶಿಸಿ, ಮತ್ತೊಂದರಲ್ಲಿ ತನ್ನ ಮೂರು ಹಡಗುಗಳೊಡನೆ ಸಾಗಿದ. ಇದನ್ನೇ ಕಾಯುತ್ತಿದ್ದ ಸ್ಪೇನಿನ ಆ ಕಪ್ತಾನ ತನ್ನ ಹಡಗಿನೊಂದಿಗೆ ಅಲ್ಲಿಂದ ಪಲಾಯನ ಮಾಡಿ, ಸ್ಪೇನ್‌ಗೆ ಹಿಂತಿರುಗಿ ಮೆಗಲಾನನ ಬಗ್ಗೆ ದೂರಿತ್ತ.

## ಕಡೆಗೂ ಕಂಡ ಜಲಮಾರ್ಗ

ಇದಾವುದನ್ನೂ ಅರಿಯದ ಮೆಗಲಾನನಿಗೆ ಕೊನೆಗೊಂದು ದಿನ ಅವನ ನಾವಿಕರು ಸಾಗರದಂತಹ ಬೃಹತ್ ಜಲಪ್ರದೇಶವೊಂದು ಗೋಚರಿಸಿದ ಶುಭ ಸಂದೇಶವನ್ನು ತಂದರು. ಅದನ್ನು ಅರಿತ ಮೆಗಲಾನ್ ಸಂತಸದಿಂದ ಕಂಬನಿ ಮಿಡಿದ.

1520ರ ನವೆಂಬರ್ 28ರಂದು ಅವನ ಹಡಗುಗಳು ಸಾಗರದಂತಹ ಬೃಹತ್ ಜಲಪ್ರದೇಶವನ್ನು ಪ್ರವೇಶಿಸಿದವು. ಕಳೆದ ಕೆಲವು ವಾರಗಳಲ್ಲಿ ತಾನು ಸಾಗಿದ ಜಲಸಂಧಿಯಲ್ಲಿನ ಅಲ್ಲೋಲಕಲ್ಲೋಲ ಪರಿಸ್ಥಿತಿಗೆ ಹೋಲಿಸಿದಲ್ಲಿ ಆ ಸಾಗರ ಪ್ರದೇಶ ಮೆಗಲಾನನಿಗೆ ಅತ್ಯಂತ ಪ್ರಶಾಂತವಾಗಿ ಕಂಡಿತು. ಹೀಗಾಗಿ ಅದನ್ನು ಮೆಗಲಾನ್ 'ಮಾರ್ ಪೆಸಿಫಿಕೋ' (ಪೆಸಿಫಿಕ್ ಸೀ, ಅಂದರೆ ಶಾಂತ ಸಮುದ್ರ ) ಎಂದು ಕರೆದ. ಮುಂದೇ ಆ ಹೆಸರೇ (ಶಾಂತ ಸಾಗರ) ಅದಕ್ಕೆ ಶಾಶ್ವತವಾಯಿತು.

ಶಾಂತ ಸಾಗರವನ್ನು ಪ್ರವೇಶಿಸಿದ ಮೊದಲ ಯೂರೋಪಿನ ನಾವಿಕನಾದ ಮೆಗಲಾನ್, ನಂತರ ಅಲ್ಲಿಂದ ಉತ್ತರಾಭಿಮುಖವಾಗಿ ಅದರ ತೀರ ಪ್ರದೇಶವನ್ನೇ ಹಿಂಬಾಲಿಸುತ್ತಾ ಸಾಗಿದ. ಆದರೆ ಅಲ್ಲಿ ತಂಗಿದರೆ ಆ ಪ್ರದೇಶದ ಜನರೊಂದಿಗೆ ಉಂಟಾಗಬಹುದಾದ ಘರ್ಷಣೆಯನ್ನು ತಡೆಯುವ ಸಲುವಾಗಿ ಅವನ ಮೂರು ಹಡಗುಗಳು ವಾಯುವ್ಯ (ನಾರ್ತ್ ವೆಸ್ಟ್) ದಿಕ್ಕಿಗೆ ತಿರುಗಿದವು.

ಶಾಂತ ಸಾಗರದ ಮೇಲೆ ಸಾಗುವಾಗ






ಮೆಗಲಾನನ ಮಹಾಯಾನ ಸಾಗಿದ ಹಾದಿಯ ಪೂರ್ಣವಿವರಗಳು
ಚಿತ್ರ ಕೃಪೆ ಸೆಮ್ ಹೂರ್ ಮತ್ತು ವಿಕಿಮೀಡಿಯಾ ಕಾಮನ್ಸ್

